**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆ:- 816/2021**

**ಪ್ರಾಸಾಃ- 36 ಚಾಸಾಃ- 52**

| | | |
|---|---|---|
| ಸಾಕ್ಷಿಯ ಹೆಸರು | : | ಶಾರದ |
| ಗಂಡನ ಹೆಸರು | : | ಹೆಚ್.ಬಿ. ಮಲ್ಲಿಕಾರ್ಜುನ |
| ವಯಸ್ಸು | : | 50 ವರ್ಷ |
| ವೃತ್ತಿ | : | ಪಿ ಎಸ್ ಐ, ಡಿ.ಎಸ್.ಬಿ ಘಟಕ , ಬಳ್ಳಾರಿ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 25.10.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

**ನಾನು ಈ ಹಿಂದೆ ಮಹಿಳಾ ಪೊಲೀಸ್ ಠಾಣೆ, ಬಳ್ಳಾರಿಯಲ್ಲಿ ದಿನಾಂಕ : 23-06-2021 ರಿಂದ 31-08-2022 ರವರೆಗೆ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿನಾಂಕ ಃ 24-06-2021 ರಂದು ತನಿಖೆಯನ್ನು ಚಾಸ-53 ರಿಂದ ಪಡೆದು ಚಾಸಾ-8, 9 ರವರನ್ನು ಠಾಣೆಗೆ ಬರಮಾಡಿಕೊಂಡು ಆಪಾದಿತ-2 ಸೌರಪ್ಪ @ ಸೂರಿ ಕೃತ್ಯಕ್ಕೆ ಬಳಸಿದ ಮೊಬೈಲ್ ಅನ್ನು **ಚಾಸಾ** 38 ಶ್ರೀಮತಿ. ಭಾಗ್ಯಮ್ಮ **ರವರು** ಗಂಡ ಸೌರಪ್ಪ, ಬೆಸ್ತರ **ರವರು** ಜನಾಂಗ (ಚಾಸಾ-38) ಸಾಃ ಮುದ್ದನಗೇರಿ, ಆಲೂರು (ಎ.ಪಿ) ರವರು ಹಾಜರುಪಡಿಸಿದ **ನ್ನು ಚಸಾ** 8 **ಮತ್ತು** 9 **ರವರ ಸಮಕ್ಷಮ** ಮಹಿಳಾ ಪೊಲೀಸ್ ಠಾಣೆಯಲ್ಲಿ ಸಂಜೆ 04:45 ಗಂಟೆಯಿಂದ 05:30 ಗಂಟೆಯವರೆಗೆ ಪಂಚನಾಮ ಮಾ **ಡಿ ಜಪ್ತು ಮಾಡಿಕೊಂಡಿದ್ದೆ.**

ಸಾಕ್ಷಿ ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ-101 ಎಂದು ಗುರುತಿಸಲಾಗಿದ್ದು, **ಅದರಲ್ಲಿ ಸಾಕ್ಷಿಯ** ಸಹಿಯನ್ನು ನಿ.ಪಿ-101(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಮೊಬೈಲ್‌ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-6 ಎಂದು ಗುರುತಿಸಲಾಗಿ **ದೆ.** ಸದರಿ ನಿ.ಪಿ-101 ರ ಸಮಯದಲ್ಲಿ ತೆಗೆದ ಫೋಟೋ ನಿ.ಪಿ-102 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. **ಆ ಸಮಯದಲ್ಲಿ** ಚಾ.ಸಾ-38 ರವರ ಹೇಳಿಕೆ ಪಡೆದಿರುತ್ತೇನೆ.

ದಿನಾಂಕ ಃ 01-07-2021 ರಂದು **ಮಾನ್ಯ ನ್ಯಾಯಾಲಯದಿಂದ ಶೋಧಾನಾ ವಾರೆಂಟ್ ಪಡೆದು** ಪಂಚರಾದ (1) ಚಾಸ-10 ಶ್ರೀ. ಜಗದೀಶ್.ಎಂ.ಎನ್ ತಂದೆ ಲೇಟ್ ನಾಗಪ್ಪ, ವಃ 51 ವರ್ಷ, ಸಹ ಶಿಕ್ಷಕರು, ಸಾ ಃ ಗಾಂಧಿನಗರ, ಬಳ್ಳಾರಿ (2) ಚಾಸ-11 ಶ್ರೀ. ಕೆ.ಎಂ. ಬಸವರಾಜ್ ತಂದೆ ಲೇಟ್ ಕೆ.ಎಂ. ದೊಡ್ಡಯ್ಯ, ಶಿಕ್ಷಕರು, ಸಾಃ ಕಪ್ಪಗಲ್ ಗ್ರಾಮ ಇವರನ್ನು ಬರ ಮಾಡಿಕೊಂಡು ಚಾಸ-33 ಶ್ರೀ. ಗುರುಗೋವಿಂದ್ ಸಿಂಗ್ ತಂದೆ ಮೋತಿ ಸಿಂಗ್, ಬೀಗ ರಿಪೇರಿ ಕೆಲಸ, ಸಾಃ ಸಿ.ಬಿ. ಬಳ್ಳಾರಿ ಈತನನ್ನು ಕರೆಯಿಸಿಕೊಂಡು ಚಾಸ-44 ಎ.ಎಸ್.ಐ ತಿಮ್ಮಾರೆಡ್ಡಿ, ಚಾಸ-45 ಎ.ಎಸ್.ಐ ಶೇಕ್ಷಾವಲಿ, ಚಾಸಾ-46 ಹೆಚ್.ಸಿ-454, ಮುಕ್ತಿಯಾರ್ ರವರೊಂದಿಗೆ ಬೆಳಿಗ್ಗೆ 10:30 ಗಂಟೆಗೆ ಠಾಣೆ ಬಿಟ್ಟು ಬೆಳಿಗ್ಗೆ 10:45 ಗಂಟೆಗೆ ರಾಮಾಂಜನೇಯ ನಗರ ಸ್ಥಳ ಮೃತ

ಜಯಮ್ಮ ರವರ **ಮನೆಯ ಮುಂದೆ ಹೋಗಿ ಚಾಸಾ** 33 **ರವರಿಂದ** ಮನೆಯ ಬೀಗ ತೆಗೆಯಿಸಿ ಶೋಧಿಸಲಾಗಿ, ಮನೆಯ ಹಾಲ್‌ನಲ್ಲಿ ಟಿ.ವಿ. ಸ್ಟ್ಯಾಂಡ್ ಟೇಬಲ್ ಡ್ರಾದಲ್ಲಿ ನೋಡಲಾಗಿ –

ಪ್ಲಾಸ್ಟಿಕ್ ಕವರ್ ಮೇಲೆ ರಾಮಾಂಜಿ ಮಲ್ಲಯ್ಯ ಅಂತಾ ಬರೆದಿದ್ದು, ಕವರ್‌ನೊಳಗಿದ್ದ ದಾಖಲಾತಿಯನ್ನು ಪರಿಶೀಲಿಸಲಾಗಿ ಒಂದು ಪ್ರಾಮಿಸರಿ ನೋಟ್ ಇದ್ದು, ದಿನಾಂಕ ಃ 15–11–2020 ರಂದು ರೂ 20,000/– ರಾಮಲಕ್ಷ್ಮಿಯಿಂದ ರಾಮಾಂಜಿನಿ ಪಡೆದಿದ್ದು ಇರುತ್ತದೆ. ಸಹಿ ಮಾಡಿದ್ದು ಇರುತ್ತದೆ. ಸಾಕ್ಷಿಯಾಗಿ ಸುರೇಶ್ ಮತ್ತು ಮಲ್ಲಯ್ಯ ಸಹಿ ಇರುತ್ತದೆ.

ಪ್ಯಾಸೆಂಜರ್ ಡೀಸೆಲ್ ಆಟೋ ನಂ–ಕೆ.ಎ–34/ಎ–2957 ನೇದ್ದರ ಮೂಲ ಆರ್.ಸಿ ಬುಕ್ ಸದರಿ ಆಪಾದಿತ ರಾಮಾಂಜಿನಿಗೆ ಸಂಬಂಧಿಸಿದ್ದು ಇರುತ್ತದೆ.

ಕೊನೆಯಲ್ಲಿ ಬೀರುವಗಳ ಶೋಧನೆ ಮಾಡಿ ನೋಡಲಾಗಿ ಯಾವುದೇ ಪುರಾವೆಗಳು ಕಂಡು ಬಂದಿರುವುದಿಲ್ಲ.

1) ಸದರಿ ಪ್ರಾಮಿಸರಿ ನೋಟ್ ಮತ್ತು ಆಟೋದ ಮೂಲ ಆರ್.ಸಿ **ಬುಕ್ ನ್ನು** ಪಂಚನಾಮೆಯನ್ನು ಬೆಳಿಗ್ಗೆ 10:45 ಗಂಟೆಯಿಂದ ಮಧ್ಯಾಹ್ನ 12:00 ಗಂಟೆಯವರೆಗೆ ಮಾಡಿ **ಜಪ್ತು ಮಾಡಿಕೊಂಡಿದ್ದೆ.**

ಪಂಚನಾಮೆಯನ್ನು **ಈಗಾಗಲೇ** ನಿ.ಪಿ–10 ಎಂದು ಗುರುತಿಸಲಾಗಿ **ದೆ.** ಸಾಕ್ಷಿ ಸಹಿಯನ್ನು ನಿ.ಪಿ–10(ಸಿ) ಎಂದು ಗುರುತಿಸಲಾಯಿತು. ನಿ.ಪಿ–10 ರ ಕಾಲಕ್ಕೆ ತೆಗೆದ ಫೋಟೋ **ವನ್ನು** ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿ.ಪಿ–11 ಎಂದು ಗುರುತಿಸಲಾಗಿದೆ. **ಸಾಕ್ಷಿಯು ನಿಪಿ**–10 **ಪಂಚನಾಮೆ ಸಮಯದಲ್ಲಿ ಜಪ್ತು ಮಾಡಿಕೊಂಡಂತಹ ದಾಖಲೆಗಳನ್ನು ನೋಡಿ ಗುರುತಿಸಿದ್ದು ಅವುಗಳು ಜೆರಾಕ್ಸ್ ಪ್ರತಿ ಇದುದ್ದುದರಿಂದ ನಿಶಾನೆಯಾಗಿ ಗುರುತಿಸಿಲ್ಲ.**

ನಂತರ ದಿನಾಂಕ ಃ 01–07–2021 ರಂದು ಫೆಡ್ ಬ್ಯಾಂಕ್ **ಗೆ ಭೇಟಿ ನೀಡಿ** ಪಂಚರಾದ ಚಾ.ಸಾ–10 & 11 **ರವರ ಸಮಕ್ಷಮ** ಆಪಾದಿತ ಮಲ್ಲಯ್ಯ ರವರ ಸಂಬಂಧಿ ಅಂಬರೀಶ್ ಚಾಸಾ–24 ರವರು ತೋರಿಸಿ **ದ ಮತ್ತು** ಬ್ಯಾಂಕ್ ಮ್ಯಾನೇಜರ್ ಚಾ.ಸಾ–34 ಹಾಜರುಪಡಿಸಿ **ದ್ದ ಮು ಮಾ** 4 **ಮತುತ** 5 **ವಸ್ತುಗಳನ್ನು ನಾನು ನಿಪಿ**–43 **ರಂತೆ ಪಂಚನಾಮೆಯನ್ನು ಮಾಡಿ ಜಪ್ತು ಮಾಡಿಕೊಂಡಿದ್ದೆ. ಸದರಿ ಪಂಚನಾಮೆ ಸಮಯದಲ್ಲಿ ನಿಪಿ**–44 **ರಂತೆ** 6 **ಪೋಟೋಗಳನ್ನು ತೆಗಸಿದ್ದೆ. ಅದೇ ಸಮಯದಲ್ಲಿ** ಚಾಸಾ–34, 35 ರವರ ಹೇಳಿಕೆ ಪಡೆದಿ **ದ್ದೆ. ಚಾಸಾ** 35 **ರವರಿಂದ ಮು ಮಾ** 4 **ಮತ್ತು** 5 **ಆಭರಣಗಳನ್ನು ತೂಕ ಮಾಡಿಸಿದ್ದೆ.**

ದಿನಾಂಕ ಃ 01–07–2021 ರಂದು ಸಾಕ್ಷಿ–24 ಅಂಬರೀಶ್ ತಾನು ಬ್ಯಾಂಕಿಗೆ ಕಟ್ಟಿದ ರಸೀ ದಿಗಳನ್ನು ತಂದು ಹಾಜರುಪಡಿಸಿದ್ದು, ಅವುಗಳನ್ನು ತನಿಖೆಯಲ್ಲಿ ಅಳವಡಿಸಿಕೊಂಡೆನು. ಸಾಕ್ಷಿ ಸದರಿ ರಸೀದಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿ.ಪಿ–45 ರಿಂದ 47 ಎಂದು ಗುರುತಿ **ಲಾಗಿದೆ.** ಸಾಕ್ಷಿ ಸಹಿಯನ್ನು 45(ಬಿ) ಯಿಂದ 47(ಬಿ) ಎಂದು ಗುರುತಿಸಲಾಯಿತು.

**<u>ನಂತರ, ದಿನಾಂಕ ಃ 02–07–2021 ರಂದು</u>** ಚಾಸಾ –53 ರವರು ಜ್ಞಾಪನ ಪತ್ರ ನೀಡಿ ಶವ ಪತ್ತೆಗೆ ಸೂಚಿಸಿದ್ದರು. ಸಾಕ್ಷಿ **ಯು ಸದರಿ** ಜ್ಞಾಪನ **ಪತ್ರವನ್ನು** ನೋಡಿ ಗುರುತಿಸಿದ್ದು, ಅದನ್ನು

ನಿಪಿ–113 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ–113(ಎ) ಎಂದು ಗುರುತಿಸಲಾಯಿತು.

ಪಂಚರಾದ ಚಾಸಾ–12 ಮತ್ತು 13 ರವರ ಸಮಕ್ಷಮ ಆಂಧ್ರದ ಆಲೂರು ತಾಲ್ಲೂಕು, ಹೊಳಗುಂದ ಗ್ರಾಮ ಪಂಚಾಯತಿ ಗೆ ಚಾಸಾ 1 ರವರ ಜೊತೆ ಹೋಗಿ ಅಲ್ಲಿ ಕೆಲಸ ಮಾಡುತ್ತಿದ್ದ ಚಾಸಾ–20 – ಹುಲಿಗೆಪ್ಪ ತಂದೆ ಪರಸಪ್ಪ ರವರನ್ನು ವಿಚಾರಿಸಿ ಅವರ ಹೇಳಿಕೆಯನ್ನು ಪಡೆದುಕೊಂಡಿದ್ದೆ. ಆತ ತನ್ನ ಮೊಬೈಲ್ ನಲ್ಲಿ ಮೃತರ ಪೋಟೋಗಳನ್ನು ತೆಗೆದಿದ್ದೆ ಎಂದು ತೋರಿಸಿದ್ದ. ಚಾಸಾ 1 ರವರು ಸದರಿ ಮೊಬೈಲ್ ನಲ್ಲಿದ್ದ ಶವಗಳನ್ನು ನೋಡಿ ಗುರುತಿಸಿದ್ದರು. ಅಲ್ಲಿಗೆ ಚಾಸಾ 36 ರವರನ್ನು ಕರೆಸಿ ಚಾಸಾ 20 ರವರ ಮೊಬೈಲ್ನ ಪೋಟೋಗಳನ್ನು ಡಿವಿಡಿ ಗೆ ಹಾಕಿಸಿ 4 ಪೋಟೋಗಳನ್ನು ಜಪ್ತು ಮಾಡಿಕೊಂಡಿದ್ದೆ. ಆ ಸಮಯದಲ್ಲಿ ಚಾಸಾ 36 ರವರ ಹೇಳಿಕೆಯನ್ನು ಪಡೆದುಕೊಂಡಿದ್ದೆ. ಚಾಸಾ 36 ರವರಿಂದ ನಿಪಿ–104 ರಂತೆ ರಸೀದಿಯನ್ನುಪಡೆದುಕೊಂಡಿದ್ದೆ. ಸಾಕ್ಷಿಯ ಸಹಿಯನ್ನು ನಿಪಿ–104(ಎ)ಎಂದು ಗುರುತಿಸಲಾಯಿತು.

ಚಾಸಾ–36 ರವರಿಂದ 65(ಬಿ) ಸಾಕ್ಷಿ ಅಧಿನಿಯಮದಡಿ ಪ್ರಮಾಣ ಪತ್ರ ಪಡೆದಿರುತ್ತೇವೆ ಅದನ್ನು ಈಗಾಗಲೇ ನಿಪಿ–103 ಎಂದು ಗುರುತಿಸಿದ್ದು, ಸಾಕ್ಷಿ ಸಹಿ 103(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ಪಂಚಾಯಿತಿಯಲ್ಲಿ ಮಾಡಿದ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–12 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ–12(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಡಿ.ವಿ.ಡಿ ನಿಪಿ–13 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ ನಿಪಿ–13 ಡಿವಿಡಿ ಪ್ಲೇ ಮಾಡಿ ತೋರಿಸಿದಾಗ ಅದರಲ್ಲಿನ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ–12 ಪಂಚನಾಮೆ ಸಮಯದಲ್ಲಿ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ–50 ಎಂದು ಗುರುತಿಸಲಾಗಿರುತ್ತದೆ. ನಂತರ ಚಾಸಾ–53 ರವರಿಗೆ ವರದಿಯನ್ನು ಸಲ್ಲಿಸಲಾಯಿತು. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–114 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–114(ಎ) ಎಂದು ಗುರುತಿಸಲಾಯಿತು. ಚಾಸಾ–20 ನನ್ನ ಮುಂದೆ ನಿಪಿ–28 ರಂತೆ ಹೇಳಿಕೆ ನೀಡಿರುತ್ತಾರೆ.

**ನಂತರ ದಿನಾಂಕ : 07–07–2021 ರಂದು ಸಿ.ಇ.ಎನ್ ಪೋಲೀಸ್ ಠಾಣೆಯಲ್ಲಿ** ಬಳ್ಳಾರಿ ಸೈಬರ್ ಕಂಪ್ಯೂಟರ್ ಕೊಠಡಿಯಲ್ಲಿ ಪಂಚ ರಾದ ಪ್ರಶಾಂತ್ ಕುಮಾರ್ ತಂದೆ ಮಹೇಶ್ ಕುಮಾರ್, ಸಾಃ ಕೌಲ್‌ಬಜಾರ್ ಮತ್ತು ವಲಿ ಭಾಷ ತಂದೆ ಮಾಬು ಸಾಬ್, ಸಾಃ ಮರಾಠ ಬೀದಿ, ಎಸ್.ಪಿ ಸರ್ಕಲ್, ಬಳ್ಳಾರಿ ರವರ ಸಮಕ್ಷಮ ಆರೋಪಿರ ಮೊಬೈಲ್ ಗಳಾದ ಮು ಮಾ 2, 3, 6 ಮತುತ 7 ಗಳನ್ನು ನಿಪಿ–105 ರಂತೆ ಪಂಚನಾಮೆಯನ್ನು ಮಾಡಿ ವಿಶ್ಲೇಷಣೆ ಸಲುವಾಗಿ ಜಪ್ತು ಮಾಡಿಕೊಳ್ಳಲಾಯಿತು.ಸಾಕ್ಷಿಯು ನಿಪಿ–105 ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–105(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ಪಂಚನಾಮೆ ಸಮಯದಲ್ಲಿ ತೆಗೆದ ಫೋಟೋ ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ–106 ಎಂದು ಗುರುತಿಸಲಾಗಿದೆ. ಚಾಸಾ–24 ನನ್ನ ಮುಂದೆ ನಿಪಿ–48

ರಂತೆ, ಚಾಸಾ–33 ನನ್ನ ಮುಂದೆ ನಿಪಿ–60 ರಂತೆ ಹೇಳಿಕೆ ನೀಡಿರುತ್ತಾರೆ. ಚಾಸಾ–1 ನನ್ನ ಮುಂದೆ ನಿಪಿ–17 ಮತ್ತು 18 ರಂತೆ ಹೇಳಿಕೆ ನೀಡಿರುತ್ತಾರೆ.

**ನಂತರ ಕೇಸಿನ** ಕಡತವನ್ನು ಮುಂದಿನ ತನಿಖೆಗಾಗಿ **ಚಾಸಾ** 53 ಶ್ರೀ. ಕೆ.ಬಿ.ವಾಸುಕುಮಾರ್., ಪಿ.ಐ ಮಹಿಳಾ ಠಾಣೆ ರವರಿಗೆ ನೀಡಿರುತ್ತೇನೆ.

ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ**

ಭಾಗ್ಯಮ್ಮಳ ಗುರುತಿನ ಚೀಟಿಯನ್ನು ಪಡೆದುಕೊಂಡಿದ್ದೆನು ಇಲ್ಲವೋ ನೆನಪಿಲ್ಲ. ಚಾಸಾ 44 ನನ್ನ ಕೆಳಗಿನ ಅಧಿಕಾರಿಯಾಗಿರುತ್ತಾರೆ. ಮೃತ ಜಯಮ್ಮ ಮತ್ತು ರಾಮಲಕ್ಷ್ಮಮ್ಮ ರವರ ಮೃತ ದೇಹ ಇದುವರೆಗೂ ಪತ್ತೆಯಾಗಿಲ್ಲ ಎಂದರೆ ಸರಿ. ದಿಃ 1–7–2021 ರಂದು ನಾನು ಮೃತರ ಮನೆಗೆ ಭೇಟಿ ನೀಡಿದ್ದೆ ಎಂದು ಮತ್ತು ಅಲ್ಲಿ ಪಂಚನಾಮೆಯನ್ನು ಮಾಡಿದಾಖಲಾತಿಗಳನ್ನು ಜಪ್ತು ಮಾಡಿಕೊಂಡಿದ್ದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ನೋಟೀಸ್ ಜಾರಿ ಮಾಡಿ ಚಾಸಾ 33 ರವರಿಂದ ಮನೆಯ ಬಾಗಿಲು ತೆಗೆಸಿ ಮನೆಯ ಒಳಗೆ ಹೋಗಿ ಅಲ್ಲಿ ಪಂಚನಾಮೆಯನ್ನು ದಾಖಲಾತಿಗಳನ್ನು ಜ ಪ್ತು ಮಾಡಿಕೊಂಡಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಫೆಡ್ ಬ್ಯಾಂಕ್ ನಲ್ಲಿ ಆಭರಣಗಳನ್ನು ಯಾರು ಒತ್ತೆ ಇಟ್ಟಿದ್ದರು ಎಂದು ನಾನು ವಿಚಾರಣೆ ಮಾಡಿದ್ದೆ. ದಿಃ 2–7–2021 ರಂದು ಒಳಗುಂದಿ ಗ್ರಾಮಕ್ಕೆ ಭೇಟಿ ನೀಡಿ ಚಾಸಾ 20 ರವರನ್ನು ವಿಚಾರಣೆ ಎಂದು ಮಾಡಿದ್ದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.ಚಾಸಾ 20 ರವರ ಪೋಟೋಗಳನ್ನು ತೋರಿಸಿದ್ದರು ಎಂದು ಮತ್ತು ಚಾಸಾ 1 ರವರು ಸದರಿ ಪೋಟೋಗಳಲ್ಲಿದ್ದ ಹೆಣಗಳನ್ನು ನೋಡಿ ಗುರುತಿಸಿದ್ದರು ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಚಾಸಾ 36 ರವರಿಂದ ಚಾಸಾ 20 ರವರ ಮೊಬೈಲ್ ನಲ್ಲಿದ್ದ ಪೋಟೋಗಳನ್ನು ಡಿ ವಿಡಿ ಗೆ ಡೌನಿ ಲೋಡ್ ಮಾಡಿ ಪೋಟೋಗಳನ್ನು ಪಂಚನಾಮೆ ಮಾಡಿ ಜಪ್ತು ಮಾಡಿಕೊಂಡಿದ್ದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲಲ್ಲ. ಚಾಸಾ 36 ರವರ ಹೇಳಿಕೆಯನ್ನು ಪಡೆದುಕೊಡಿಂದ್ದೆ ಎಂದು ಮತ್ತು ಅವರಿಂದ ಪ್ರಮಾಣ ಪತ್ರವನುನ ಪಡೆದುಕೊಂಡಿದ್ದೆ ಎಂದು ಸುಳ್ಳು

ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಎಲ್ಲಾ ಪಂಚನಾಮೆಗಳನ್ನು ಮತ್ತು ಸಾಕ್ಷಿದಾರರುಗಳ ಹೇಳಿಕೆಗಳನ್ನು ಹಾಗೂ ದಾಖಲಾತಿಗಳನ್ನು ಈ ಪ್ರಕರಣಕ್ಕೋಸ್ಕರ ಠಾಣೆಗಯಲ್ಲಿಯೇ ಸುಳ್ಳು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯುಲ್ಲ. ನಾನು ಹೇಳಿದಂತೆ ನನ್ನ ಮುಂದೆ ಯಾವುದೇ ಸಾಕ್ಷಿದಾರರುಗಳು ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಪ್ರಕರಣದಲ್ಲಿ ಯಾವುದೆ ತನಿಖೆಯನ್ನು ಮಾಡದೇ ಇದ್ದರೂ ಸಹ ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**